International Journal of Kannada Research
www.kannadajournal.com

ISSN: 2454–5813
IJKR 2017; 3(3): 90-92
© 2017 IJKR
www.kannadajournal.com
Received: 18-05-2017
Accepted: 19-06-2017

**ರಂಜಿತಾ ಯಂ**
ಸಂಶೋಧನಾ ವಿದ್ಯಾರ್ಥಿನಿ,
ಇತಿಹಾಸ ವಿಭಾಗ, ಮಂಗಳೂರು
ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ

**Correspondence**
**ರಂಜಿತಾ ಯಂ**
ಸಂಶೋಧನಾ ವಿದ್ಯಾರ್ಥಿನಿ,
ಇತಿಹಾಸ ವಿಭಾಗ, ಮಂಗಳೂರು
ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ

# ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ: ಕಾರ್ನಾಡು ಸದಾಶಿವರಾವ್

**ರಂಜಿತಾ ಯಂ**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಕಹಳೆ ಎಲ್ಲೆಡೆ ಮೊಳಗಿಸಿದವರಲ್ಲಿ ಶ್ರಮಿಸಿದವರು ಕಾರ್ನಾಡು ಸದಾಶಿವರಾವ್. ಜಿಲ್ಲೆಯ ಪ್ರತಿಯೊಬ್ಬನಲ್ಲೂ ದೇಶಭಕ್ತಿ ಮೂಡಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರಣೆ ನೀಡಿದವರು. ಸದಾಶಿವರಾವ್ ಕರ್ನಾಟಕ ಕಂಡ ಅಪ್ಪಟ ದೇಶಭಕ್ತ. ದಕ್ಷಿಣ ಕನ್ನಡ ಜಿಲ್ಲಾ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು,ತ್ಯಾಗ ಬಲಿದಾನಕ್ಕೆ ಸಾಕ್ಷಿಯಾಗಿರುವ ಕಲಿಯುಗದ ಕರ್ಣ ಎಂದು ಹೆಸರು ಗಳಿಸಿದವರು ಸದಾಶಿವರಾಯರು. ಇಂತಹ ದೇಶಭಕ್ತನ ರಾಜಕೀಯ ಪ್ರವೇಶ ಅನಿರೀಕ್ಷಿತ. ವಕೀಲ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದ ಸದಾಶಿವರಾಯರಿಗೆ ಅದಾಗಲೇ ಸ್ವಾತಂತ್ರ್ಯದ ಕರೆ ಕಿವಿಗೆ ಬಡಿಯುತ್ತಿತ್ತು. ಕ್ರಿ.ಶ. 1919–1920 ರ ಸಂದರ್ಭದಲ್ಲಿ ಗಾಂಧೀಜೀಯವರು ರಾಷ್ಟ್ರ ವ್ಯಾಪ್ತಿ ಸ್ವಾತಂತ್ರ್ಯದ ಕರೆ ನೀಡಿದಾಗ ಆ ಕರೆಗೆ ತಲೆದೂಗಿದ ಸದಾಶಿವರಾಯರು ತಮ್ಮ ವಕೀಲ ವೃತ್ತಿಯನ್ನು ತೊರೆದು ತಾಯ್ನಾಡಿನ ಸೇವೆಗೆ ಧುಮುಕಿದರು. ರಾಷ್ಟ್ರೀಯ ಚಳುವಳಿಯ ಪ್ರಚಾರಕ್ಕಾಗಿ ಜಿಲ್ಲೆಯಾದ್ಯಂತ ಸಂಚರಿಸಿದ ಕಾರ್ನಾಡು ಸದಾಶಿವರಾಯರು ವಿದೇಶಿ ನೀತಿಯ ವಿರುದ್ಧ ಸಮರ ಸಾರಿಸಿದರು. ವಿದೇಶಿ ವಸ್ತ್ರ, ವಿದೇಶಿ ವಸ್ತುಗಳ ನಾಶಕ್ಕೆ ನಾಂದಿ ಹಾಡಿ ಕಾಂಗ್ರೆಸ್ ಪಕ್ಷದ ಸಲುವಾಗಿ ದುಡಿಯಲು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ದೇಶದಲ್ಲಿ ಕಾಂಗ್ರೆಸ್ ವಿಸ್ತಾರಗೊಂಡಿದ್ದರೂ ಕೂಡ ದಕ್ಷಿಣ ಕನ್ನಡದಲ್ಲಿ ಕಾಂಗ್ರೆಸ್‌ನ ಪ್ರವೇಶ ಉಂಟಾಗಲಿಲ್ಲ. ಕ್ರಿ.ಶ. 1920 ರಲ್ಲಿ ಕಲ್ಕತ್ತದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಮತ್ತು ಕ್ರಿ.ಶ. 1920 ರಲ್ಲಿ ನಡೆದ ನಾಗಪುರ ಅಧಿವೇಶನವು ಕರ್ನಾಟಕದ ರಾಜಕೀಯದಲ್ಲಿ ಹಲವು ಬದಲಾವಣೆಗೆ ಕಾರಣವಾಯಿತು. ಈ ಎರಡು ಅಧಿವೇಶನಗಳಲ್ಲಿ ಭಾಗವಹಿಸಿದ 700 ಜನ ಪ್ರತಿನಿಧಿಗಳಲ್ಲಿ ಕಾರ್ನಾಡು ಸದಾಶಿವರಾಯರು ಕೂಡ ಪ್ರಮುಖರು. ಇಲ್ಲಿನ ಅಧಿವೇಶನದಲ್ಲಿ ಕಾಂಗ್ರೆಸ್ ತಾತ್ವಿಕವಾಗಿ ಭಾಷಾವಾರು ಪ್ರಾಂತ್ಯಗಳ ರಚನೆಯ ಅಂಗೀಕಾರಕ್ಕೆ ಒಪ್ಪಿಗೆ ಸೂಚಿಸಿ ಕರ್ನಾಟಕಕ್ಕೆ ಪ್ರಾಂತೀಯ ಸ್ಥಾನವನ್ನು ನೀಡಿತು. ಈ ಅಧಿವೇಶನದಲ್ಲಿ ಭಾಗವಹಿಸಿ ಹಿಂದಿರುಗಿದ ನಂತರ ಕಾಂಗ್ರೆಸ್‌ನ ಪಕ್ಷವನ್ನು ದಕ್ಷಿಣ ಕನ್ನಡದಲ್ಲಿಯೂ ರಚಿಸಬೇಕು ಎನ್ನುವ ಉದ್ದೇಶದಿಂದ ತಮ್ಮ ಮನೆಯಲ್ಲಿಯೇ ಮಂಗಳೂರಿನ ನಾಗರಿಕ ಸಭೆಯೊಂದನ್ನು ಕರೆದರು. ಇತರ ಸದಸ್ಯರೊಂದಿಗೆ ಚರ್ಚಿಸಿ ಕ್ರಿ.ಶ. 1920 ರಲ್ಲಿ ದಕ್ಷಿಣ ಕನ್ನಡ ಜಿಲಾ ಕಾಂಗ್ರೆಸ್ ಸಮಿತಿಯನ್ನು ರಚಿಸಿದರು. ಇದರ ಕಾರ್ಯದರ್ಶಿಯಾಗಿ ಕಾರ್ನಾಡು ಸದಾಶಿವರಾವ್ ರವರೇ ಆಯ್ಕೆಯಾದರು. ನಂತರ ಇದರ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದರು. ತದ ನಂತರ ಕಾಂಗ್ರೆಸ್‌ನ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡು ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ಕಾಂಗ್ರೆಸ ಸಮಿತಿಗಳು ಸ್ಥಾಪಿತವಾಗುವಲ್ಲಿ ಕಾರ್ನಾಡು ಸದಾಶಿವರಾಯರು ಕಾರಣರಾದರು. ಮುಖ್ಯವಾಗಿ ಕಾಸರಗೋಡು, ಮಂಗಳೂರು, ಬಂಟ್ವಾಳ, ಪಾಣೆ ಮಂಗಳೂರು, ಪುತ್ತೂರು, ಕಾರ್ಕಳ, ಮೂಡಬಿದಿರೆ, ಉಡುಪಿ, ಕುಂದಾಪುರ ತಾಲೂಕುಗಳಲ್ಲಿ ಕಾಂಗ್ರೆಸ್ ಸಮಿತಿಗಳು ಸ್ಥಾಪಿತಗೊಂಡವು. ಆರಂಭದಲ್ಲಿ ಕಾಂಗ್ರೆಸ್‌ನ ಚಟುವಟಿಕೆಗಳನ್ನು ಕೇವಲ ಮಂಗಳೂರಿನ ಪರಿಧಿಯಲ್ಲಿ ವಿಸ್ತರಿಸಲು ಸಾಧ್ಯವಾಗಿ, ನಂತರದ ದಿನಗಳಲ್ಲಿ ಅದರ ವ್ಯಾಪ್ತಿ ಕರ್ನಾಟಕದಾದ್ಯಂತ ವಿಸ್ತರಿಸುವಲ್ಲಿ ಸಫಲರಾದರು. ಇದರ ಬೆಳವಣಿಗೆಯಿಂದಾಗಿ ಕರ್ನಾಟಕದಲ್ಲಿ ಕಾಂಗ್ರೆಸ್‌ನ ಸ್ವಾತಂತ್ರ್ಯೋತ್ಸವದ ಬಾವುಟ ಹಾರಲಾರಂಭಿಸಿತು. ಸದಾಶಿವರಾಯರ ಮನೆಯು ಕಾಂಗ್ರೆಸ್‌ನ ಕಛೇರಿಯಾಗಿ ಪರಿಣಮಿಸಿತು. ಗಾಂಧಿ, ಜವಹರಲಾಲ್ ನೆಹರು, ಕಸ್ತೂರ್ ಬಾ, ಸಿ.ಆರ್.ದಾಸ್, ಆಲಿ ಸಹೋದರರು ಸದಾಶಿವರಾವ್ ರವರ ಮನೆಗೆ ಭೇಟಿಯಿತ್ತರು.

ಸದಾಶಿವರಾಯರು ಕಾ0ಗ್ರೆಸ್‌ನ ಪ್ರಚಾರ, ಅದರ ಧ್ಯೇಯೋದ್ದೇಶವನ್ನು ಜಿಲ್ಲೆಯಾದ್ಯಂತ ಹರಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡು ಪ್ರತಿಯೊಂದು ಮನೆಗೂ ಒಂದು ಚರಕವನ್ನು ನೀಡಿದರು.

"ಪ್ರತಿಯೊಂದು ಮನೆಯೂ ಕಾಂಗ್ರೆಸ್‌ನದು, ಪ್ರತಿ ವ್ಯಕ್ತಿಯೂ ಕಾಂಗ್ರೆಸಿಗ" ಎಂಬ ಸಂದೇಶವನ್ನು ಹರಡಿಸುವ ಉದ್ದೇಶದಿಂದ ಚರಕಗಳನ್ನು ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸಿದರು. ಅದಲ್ಲದೇ ತಮ್ಮ ಜೊತೆ ಯುವಕರನ್ನು ಜೊತೆಗೂಡಿಸಿ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ತೆರಳಿ ಪಕ್ಷದ ಏಳಿಗೆಗಾಗಿ ದಾನ ಸಂಗ್ರಹದ ಕೆಲಸ, ಖಾದಿ ನೇಯ್ಗೆ ಕೇಂದ್ರಗಳನ್ನು ತೆರೆಯುವ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಕಾರ್ನಾಡು ಸದಾಶಿವರಾಯರ ಇಂತಹ ಮಹತ್ತರವಾದ ಕಾರ್ಯಗಳಿಂದಾಗಿ ಅಖಿಲ ಕರ್ನಾಟಕದ ಕಾಂಗ್ರೆಸ್ ಶಾಖೆಯು ಒಂದು ಪ್ರಮುಖ ಅಂಗವಾಗಿ ಕಾರ್ಯ ನಿರ್ವಹಿಸುವಂತಾಯಿತು. ಕಾಂಗ್ರೆಸ್ ಪಕ್ಷದ ಅಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸಿದ ಕಾರ್ನಾಡು ಸದಾಶಿವರಾಯರು ಕರ್ನಾಟಕ ಮಾತ್ರವಲ್ಲದೇ ಮುಂಬೈ, ಮದ್ರಾಸ್, ಆಂಧ್ರ, ಕೇರಳಗಳಲ್ಲಿ ನಡೆದಿರುವ ಕಾಂಗ್ರೆಸ್‌ನ ಸಭೆ, ಸಮ್ಮೇಳನಗಳಲ್ಲಿ ಭಾಗವಹಿಸಿದರು. ಈ ರೀತಿ ದೇಶದಾದ್ಯಂತ ಕಾಂಗ್ರೆಸ್‌ನ ಪರಿಯಟನೆ ಮಾಡಿದ ಸದಾಶಿವರಾಯರು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಮುಖಂಡರ ಪೈಕಿ ಇವರೂ ಕೂಡ ಪ್ರಮುಖರಾದರು.

ಕ್ರಿ.ಶ. 1921 ರಲ್ಲಿ ಅಹ್ಮದಾಬಾದ್‌ನಲ್ಲಿ ನಡೆದ 36ನೇ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ನಂತರ ಸದಾಶಿವರಾವ್‌ರವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನ ಜಾಗೃತಿ ಮೂಡಿಸಬೇಕೆಂಬ ಉದ್ದೇಶವನ್ನು ಹೊಂದಿದರು. ಸ್ವಾತಂತ್ರ್ಯದ ಸಂಪೂರ್ಣತೆಯನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆ ಪ್ರತಿ ವರ್ಷವು ದೇಶದ ಪ್ರಮುಖ ನಗರದಲ್ಲಿ ಅಧಿವೇಶನವನ್ನು ನಡೆಸಿ, ಪ್ರಮುಖ ನಿರ್ಣಯಗಳನ್ನು ಕೈಗೊಳ್ಳುತ್ತಿತ್ತು. ಆದರೂ ಇದರ ಪ್ರಭಾವವು ಕೆಲವು ಪ್ರಾಂತ್ಯಗಳವರೆಗೆ ತಲುಪಿರಲಿಲ್ಲ. ಕಾಂಗ್ರೆಸ್‌ನ ಪ್ರಭಾವವನ್ನು ಕರ್ನಾಟಕದ ಮೂಲೆ ಮೂಲೆಗೂ ಹರಡಿಸಬೇಕು, ಅದರ ಸದಸ್ಯರ ಸಂಖ್ಯೆಯನ್ನು ಏರಿಸಬೇಕು ಎನ್ನುವ ಉದ್ದೇಶ ಅನಿವಾರ್ಯವಾಗಿತ್ತು. ಈ ನಿಟ್ಟಿನಲ್ಲಿ ಈ ಕಾರ್ಯಕ್ಕೆ ಮೊದಲ ಬಾರಿಗೆ ಕೈ ಹಾಕಿದವರು ಸದಾಶಿವರಾಯರು. ಕರ್ನಾಟಕ ಪ್ರಾಂತ್ಯವು ಬ್ರಿಟಿಷ್ ಪ್ರಾಂತ್ಯ, ದೇಶೀಯ ಸಂಸ್ಥಾನಗಳಲ್ಲಿ ವಿಭಾಗಿಸಲ್ಪಟ್ಟು ವಿಲೀನಗೊಂಡಂತಹ ಸಂದರ್ಭದಲ್ಲಿ ಅವುಗಳನ್ನೆಲ್ಲಾ ಒಟ್ಟಾಗಿ ನೆಲೆಗೊಳಿಸುವುದು ಅಗತ್ಯವಾಗಿತ್ತು. ಹಾಗಾಗಿ ಅಖಿಲ ಕರ್ನಾಟಕ ಕಾಂಗ್ರೆಸ್ ಸಮ್ಮೇಳನವನ್ನು ಮಂಗಳೂರಿನಲ್ಲಿ ನಡೆಸಲು ನಿರ್ಣಯಿಸಲಾಯಿತು. ಕ್ರಿ.ಶ. 1922 ಫೆಬ್ರವರಿಯಲ್ಲಿ ಅಖಿಲ ಕರ್ನಾಟಕ ಕಾಂಗ್ರೆಸ್ ಸಮ್ಮೇಳನವು ಸರೋಜಿನಿ ನಾಯ್ಡುರವರ ಅಧ್ಯಕ್ಷತೆಯಲ್ಲಿ ಜರುಗಿತು. ರಾಷ್ಟ್ರೀಯ ಪ್ರಚೋದನೆಯನ್ನು ನೀಡುವ ಉದ್ದೇಶದಿಂದ ಜರುಗಿದ ಈ ಸಮ್ಮೇಳನದ ಪ್ರಭಾವದಿಂದ ಅನೇಕ ಮಹಿಳೆಯರು, ವಯಸ್ಸಿನ ತಾಯಂದಿರು, ಮುದುಕಿಯರು ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಅದಲ್ಲದೇ ಈ ಸಮ್ಮೇಳನದಿಂದಾಗಿ ಅನೇಕ ಮಹನೀಯರು ಪರಸ್ಪರ ಪರಿಚಿತರಾದರು. ಶ್ರೀ ಗಂಗಾಧರರಾವ್ ದೇಶಪಾಂಡೆ, ಶ್ರೀನಿವಾಸ್‌ರಾವ್ ಕೌಜಲಗಿ, ರಂಗನಾಥ್ ದಿವಾಕರ್, ಹರ್ಡೀಕರ್ ರವರು ಈ ಸಮ್ಮೇಳನದಲ್ಲಿ ಭಾಗಿಯಾಗಿದ್ದರು. ಕಾರ್ನಾಡು ಸದಾಶಿವರಾಯರು ಸಮ್ಮೇಳನದ ಮುಂದಾಳತ್ವ ವಹಿಸಿದ ಕಾರಣದಿಂದಾಗಿ ಕರ್ನಾಟಕದ ಪ್ರಮುಖ ಮುಂಖಡರೆನಿಸಿಕೊಂಡರು.

ಇಷ್ಟೆಲ್ಲಾ ಒಗ್ಗಟ್ಟಿನ ಪರಿಭಾಷೆಯಲ್ಲಿದ್ದ ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯಗಳು ಮೂಡತೊಡಗಿದವು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್‌ನ ನಾಯಕರ, ಮುಖಂಡರ ಸ್ಥಾನಮಾನಗಳ ನಡುವೆ ಅಸೂಯೆ ಎಂಬ ಗೋಡೆಯು ಹುಟ್ಟಿಕೊಂಡಿತು. ಈ ಅಸೂಯೆ, ತಾರತಮ್ಯ ಭಾವನೆಯು ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಸುವ ಕುರಿತಾದ ಚರ್ಚೆಯಲ್ಲಿ ಭುಗಿಲೆದ್ದಿತು.

ದೇಶದ ಪ್ರಮುಖ ಸ್ಥಳಗಳಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಿದ್ದರೂ ಕರ್ನಾಟಕದ ಭಾಗಗಳಲ್ಲಿ ನಡೆದಿರಲಿಲ್ಲ. ಈ ವಿಷಯ ಪ್ರಸ್ತಾಪವಾದ ಸಂದರ್ಭದಲ್ಲಿ ಕಾರ್ನಾಡು ಸದಾಶಿವರಾಯರು ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದರು. ಕ್ರಿ.ಶ. 1924ರ ಕಾಂಗ್ರೆಸ್ ಅಧಿವೇಶನವು ಕರ್ನಾಟಕದಲ್ಲಿ ಆಗಬೇಕೆನ್ನುವ ಸಂದರ್ಭದಲ್ಲಿ ಅಧಿವೇಶನವು ಮಂಗಳೂರಿನಲ್ಲಿ ನಡೆಯಬೇಕೆನ್ನುವ ಆಶಯವನ್ನು ಸದಾಶಿವರಾಯರು ವ್ಯಕ್ತಪಡಿಸಿದರು. ಇವರ ಈ ಅಭಿಪ್ರಾಯಕ್ಕೆ ಉಳಿದ ಸದಸ್ಯರಿಂದ ಬೆಂಬಲವಿದ್ದರೂ ಕೂಡ ಗಂಗಾಧರ್‌ರಾವ್ ದೇಶಪಾಂಡೆಯವರು ಈ ಅಧಿವೇಶನ ಬೆಳಗಾವಿಯಲ್ಲಿ ನಡೆಯಬೇಕೆಂದು ಪಟ್ಟು ಹಿಡಿದರು. ಇದರಿಂದ ಸದಸ್ಯರ ನಡುವೆ ಹಲವು ಭಿನ್ನಭಿಪ್ರಾಯಗಳು ಹುಟ್ಟಿಕೊಂಡವು. ಕರ್ನಾಟಕ ಕಾಂಗ್ರೆಸ್‌ನಲ್ಲಿ ವೈಮನಸ್ಸುಗಳು ಬೆಳೆದುಕೊಂಡು ಇದು ಪಕ್ಷದ ಬಿರುಕುತನಕ್ಕೆ ಕಾರಣವಾಯಿತು. ಈ ವಾತಾವರಣವನ್ನು ತಿಳಿಗೊಳಿಸಲು ಸದಾಶಿವರಾಯರು ತಮ್ಮ ಅಪೇಕ್ಷೆಯನ್ನು ದುರ ತಳ್ಳಿ ಇತರ ಸದಸ್ಯರ ಜೊತೆ ಚರ್ಚಿಸಿ ಅವರ ಮನವೊಲಿಸಿ ಕ್ರಿ.ಶ. 1924 ರ ಕರ್ನಾಟಕ ಕಾಂಗ್ರೆಸ್ ಅಧಿವೇಶನವು ಬೆಳಗಾವಿಯಲ್ಲಿ ನಡೆಯುವಂತೆ ಮಾಡಿದರು.

ಕ್ರಿ.ಶ. 1937 ರಲ್ಲಿ ಪ್ರಾಂತೀಯ ಸರಕಾರಗಳಿಗೆ ಚುನಾವಣೆ ನಡೆಸಲು ಅವಕಾಶ ದೊರೆತ ನಂತರ ಕಾಂಗ್ರೆಸ್‌ನವರು ಚುನಾವಣೆಯಲ್ಲಿ ಭಾಗವಹಿಸಲು ನಿರ್ಧರಿಸಿದರು. ಆಗಿನ ಕಾಂಗ್ರೆಸ್ ಅಧ್ಯಕ್ಷ ಜವಹರಲಾಲ್ ನೆಹರೂರವರನ್ನು ಚುನಾವಣಾ ಪ್ರಚಾರಕ್ಕೆ ಬರಮಾಡಿಕೊಳ್ಳಬೇಕೆಂಬ ಉದ್ದೇಶವನ್ನು ಹೊಂದಿದ್ದ ಜಿಲ್ಲಾ ಮತ್ತು ರಾಜ್ಯ ಕಾಂಗ್ರೆಸ್‌ನ ನಾಯಕರು ಕಾರ್ನಾಡು ಸದಾಶಿವರಾಯರ ನೇತೃತ್ವದಲ್ಲಿ ನೆಹರೂರವರನ್ನು ಕರ್ನಾಟಕಕ್ಕೆ ಮತ್ತು ಮಂಗಳೂರಿಗೆ ಆಗಮಿಸಬೇಕೆಂದು ಆಹ್ವಾನ ನೀಡಿದರು. ಈ ಆಹ್ವಾನವನ್ನು ಸ್ವೀಕರಿಸಿದ ಜವಹರಲಾಲ್ ನೆಹರೂರವರು ಕ್ರಿ.ಶ. 1937 ಫೆಬ್ರವರಿ 10 ರಂದು ಮಂಗಳೂರಿಗೆ ಆಗಮಿಸಿ ಕೇಂದ್ರ ಮೈದಾನದಲ್ಲಿ ಏರ್ಪಡಿಸಲಾಗಿದ್ದ ಮಹಾ ಸಭೆಯನ್ನುದ್ದೇಶಿಸಿ ಭಾಷಣವನ್ನು ಮಾಡಿದರು.

ಕ್ರಿ.ಶ. 1937 ರಲ್ಲಿ ರಾಜ್ಯ ವಿಧಾನ ಸಭೆಗೆ ಚುನಾವಣೆ ಘೋಷಣೆ ಆದ ಸಂದರ್ಭದಲ್ಲಿ ಕಾರ್ನಾಡು ಸದಾಶಿವರಾವ್‌ರವರನ್ನು ಅಭ್ಯರ್ಥಿ ಸ್ಥಾನಕ್ಕೆ ಜಿಲ್ಲಾ ಕಾಂಗ್ರೆಸ್ ಸಮಿತಿ ಆಯ್ಕೆ ಮಾಡಿತು. ಆದರೆ ಕೆಲವು ಸದಸ್ಯರ ಸ್ವಾರ್ಥಯುಕ್ತ ಅಧಿಕಾರ ದಾಹದಿಂದ ಕಾರ್ನಾಡು ಸದಾಶಿವರಾಯರ ಹೆಸರಿನ ಬದಲಿಗೆ ತಮ್ಮ ಹೆಸರುಗಳನ್ನು ದಾಖಲಿಸಿದರು. ಅಲ್ಲದೇ ಸದಾಶಿವರಾವ್ ರವರ ವಿರುದ್ಧ ಸುಳ್ಳು ಸುದ್ದಿಯನ್ನು ಹರಡಿದರು. ಚುನಾವಣೆಗೆ ಅಭ್ಯರ್ಥಿ ಪಟ್ಟಿ ಬಿಡುಗಡೆಯಾದಾಗ ಅದರಲ್ಲಿ ಸದಾಶಿವರಾವ್‌ರವರ ಹೆಸರು ಇಲ್ಲದ್ದನ್ನು ಕಂಡ ಕಾಂಗ್ರೆಸ್‌ನ ಕೆಲವು ನಿಸ್ವಾರ್ಥ ಸೇವಕರು ಈ ವಿಚಾರವನ್ನು ಹೈಮಾಂಡ್‌ಗೆ ತಿಳಿಸಿದರು. ಇದರ ಫಲವಾಗಿ ಸರ್ದಾರ್ ಪಟೇಲರು ಕ್ರಿ.ಶ. 1937 ರ ಫೈಜಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸುವಂತೆ ಸದಾಶಿವರಾಯರಿಗೆ ತಂತಿಯ ಮೂಲಕ ಸಂದೇಶ ಕಳುಹಿಸಿದರು. ತಂತಿಯ ಹಿಂದೆ ತಂತಿಯಂತೆ ಒಟ್ಟು ನಾಲ್ಕು ಸಂದೇಶಗಳು ಬಂದ ಕಾರಣ ಸದಾಶಿವರಾಯರು ಫೈಜಪುರಕ್ಕೆ ಹೊರಟರು. ಇದು ಅವರ ಜೀವನದಲ್ಲಿ ಭಾಗವಹಿಸಿದ ಕೊನೆಯ ಕಾಂಗ್ರೆಸ್ ಅಧಿವೇಶನವಾಯಿತು.

ಕಾರ್ನಾಡು ಸದಾಶಿವರಾವ್‌ರವರು ಕಾಂಗ್ರೆಸ್‌ನ ನಿಷ್ಠಾವಂತ ಮುಖಂಡನಾಗಿ ದುಡಿದು, ನಂತರ ಹಲವು ಕಾಲಗಳ ಕಾಲ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಕ್ರಿ.ಶ. 1931–34 ರ ಸಂದರ್ಭದಲ್ಲಿ ಸತತ ಮೂರು ಬಾರಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಕಾರ್ಯ ನಿರ್ವಸಿದ್ದರು. ಈ ರೀತಿ ತಮ್ಮ ಕಾರ್ಯ ವೈಖರಿಯಿಂದ ಕರ್ನಾಟಕದಲ್ಲಿ, ಕರಾವಳಿಯಲ್ಲಿ ಕಾಂಗ್ರೆಸ್‌ಗೆ ಭದ್ರ ಬುನಾದಿತನ್ನು

ಹಾಕಿದರು. ಕಾಂಗ್ರೆಸ್‌ನ ಏಳಿಗೆಗಾಗಿ ಹಗಲಿರುಳು ಶ್ರಮಿಸಿ, ಕಾಂಗ್ರೆಸ್ ಪಕ್ಷವನ್ನು ಬಲಿಷ್ಠವಾಗಿ ಬೆಳೆಸಲು ತಮ್ಮ ಸ್ವಂತ ಹಣವನ್ನೇ ವ್ಯಯಿಸಿದರು. ತಮ್ಮ ಬದುಕು, ಕುಟುಂಬ, ಸಂಪತ್ತು ಎಲ್ಲವನ್ನೂ ಕಾಂಗ್ರೆಸ್‌ಗಾಗಿ ಮುಡಿಪಾಗಿಟ್ಟ ಸದಾಶಿವರಾಯರಿಗೆ ಕೊನೆಗೆ ಸಿಕ್ಕಿದ್ದು ಮೋಸ, ಅನ್ಯಾಯದ ಕೊಡುಗೆ. ತಾನೇ ಬೆಳೆಸಿದ ಕಾಂಗ್ರೆಸ್‌ನ ಕೆಲವು ಸದಸ್ಯರಿಂದ ದೊರೆತ ಸನ್ಮಾನ. ತಮ್ಮ ನೌಕರಿಯನ್ನು ತ್ಯಜಿಸಿ ಕಾಂಗ್ರೆಸ್‌ನ ಸ್ವಯಂ ಸೇವಕರಾಗಿ ಸೇರ್ಪಡೆಯಾದವರ ಜವಾಬ್ದಾರಿಯನ್ನು ಸದಾಶಿವರಾಯರು ಹೊತ್ತುಕೊಂಡು, ಕಾಂಗ್ರೆಸ್ ಚಟುವಟಿಕೆಗಳ ಕಾರ್ಯಗಳನ್ನು ವಹಿಸಿಕೊಂಡು, ಕೇವಲ ಕಾಂಗ್ರೆಸ್ ಪಕ್ಷದ ಶ್ರೇಯಸ್ಸಿಗಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದ ಈ ತ್ಯಾಗಜೀವಿಗೆ ತನ್ನ ಕೊನೆಯ ದಿನಗಳಲ್ಲಿ ಹಣವಿಲ್ಲದೇ ನಿರ್ಗತಿಕರಾಗಬೇಕಾಯಿತು.

ದೇಶ ಸೇವೆಗಾಗಿಯೇ ಹುಟ್ಟಿದ ಈ ಕಾಂಗ್ರೆಸ್ ಭಕ್ತನ ಈ ತ್ಯಾಗಮಯನಿಗೆ ಡಾ। ಶಿವರಾಮ ಕಾರಂತರು 'ಧರ್ಮರಾಜ' ಎಂದು ತಮ್ಮ ಕಾದಂಬರಿ 'ಔದಾರ್ಯ ಉರುಳಲ್ಲಿ' ಉಲ್ಲೇಖಿಸಿದ್ದಾರೆ. ಕ್ರಿ.ಶ. 1960 ರ ಕಾಂಗ್ರೆಸ್‌ನ 65 ನೇ ಅಧಿವೇಶನ ಬೆಂಗಳೂರಿನಲ್ಲಿ ನಡೆದು, ಆ ಸ್ಥಳಕ್ಕೆ ಸದಾಶಿವ ನಗರ ಎಂದು ನಾಮಕರಣ ಮಾಡಲಾಯಿತು. ಇದೊಂದು ಗೌರವ ಅವರ ಆತ್ಮಕ್ಕೆ ತೃಪ್ತಿಯನ್ನು ನೀಡಿರಬಹುದು.

**ಆಧಾರ ಗ್ರಂಥಗಳು**


1. ಶಿವರಾಮ ಕಾರಂತ,ದೇಶಭಕ್ತ ಕಾರ್ನಾಡು ಸದಾಶಿವರಾಯರು, ಐ.ಬಿ.ಎಚ್ ಪ್ರಕಾಶನ ಬೆಂಗಳೂರು, 1972
2. ಸೂರ್ಯನಾಥ್ ಕಾಮತ್,ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ–3, ಗೀತಾ ಬುಕ್ ಹೌಸ್ ಮೈಸೂರು, 1974
3. ಹಾರೋಗದ್ದೆ ಉಷಾ ರಮೇಶ್ ನಾಯಕ್,ದಕ್ಷಿಣ ಕನ್ನಡ ಜಿಲ್ಲೆಯ ಶತಮಾನದ ಮಹಾನ್ ಪ್ರತಿಭೆಗಳು,ಭೂಮಿಕಾ ಪ್ರಕಾಶನ ಬೆಂಗಳೂರು, 2003
4. ಯಶೋಧರ ಕರ್ಕೇರ,ತ್ಯಾಗಜೀವಿ ಕಾರ್ನಾಡು ಸದಾಶಿವರಾವ್, ಕಾಂತವರ ಕನ್ನಡ ಸಂಘ ಉಡುಪಿ, 2012
5. ಮೋಹನ್ ಆಳ್ವ ಎಂ, ಸಿರಿಗನ್ನಡ ನೆನಪಿನ ಸಂಪುಟ,ಆಳ್ವಾಸ್ ಪ್ರಕಾಶನ ಮೂಡಬಿದಿರೆ ದಕ್ಷಿಣ ಕನ್ನಡ, 2013
6. ಮಾಲತಿ.ಕೆ.ಮೂರ್ತಿ, ಎಚ್. ವಿ. ನರಸಿಂಹಮೂರ್ತಿ, ಕುಂದಾಪುರ ತಾಲೂಕು:ಒಂದು ಅಧ್ಯಯನ,ಭಂಡಾರ್‌ಕರ್ಸ್ ಆರ್ಟ್ಸ್ ಆಂಡ್ ಸಾಯಿನ್ಸ್ ಕಾಲೇಜು ಕುಂದಾಪುರ, 1994
7. ವಿವೇಕ್ ರೈ ಬಿ.ಎ, ಮಂಗಳೂರು ದರ್ಶನ ಸಂಪುಟ–3, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಮಂಗಳೂರು, 2016